ಅಸಲು ದಾವಾ ನಂ. **:391/2019**
ಪಿ ಡಬ್ಲ್ಯೂ **:1**

(ಇಂದು ದಿನಾಂಕಃ **04-11-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಎನ್ ಎಲ್ ರವರಿಂದಃ

ನಾನು ಈಗ ವ್ಯವಸಾಯ ಮಾಡುತ್ತೇನೆ. ಪ್ರತಿವಾದಿ ವಿರುದ್ಧ ಇದು 3ನೇ ಪ್ರಕರಣ ದಾಖಲಿಸಿರುತ್ತೇನೆ. ಅಸಲು ದಾವಾ ನಂ. 72/12, 38/18 ರ ವಾದ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನೆನಪಿಲ್ಲ. ನಾನು ಹಿಂದಿನ ದಾವೆಗಳನ್ನು ಪ್ರತಿವಾದಿ ಪೂರ್ವ-ಪಶ್ಚಿಮ 30 ಉತ್ತರ-ದಕ್ಷಿಣ 2 ಅಡಿ ಜಾಗದಲ್ಲಿ ಕಾಂಪೌಂಡ್ ಹಾಕಿದ್ದ ಬಗ್ಗೆ ದಾಖಲಿಸಿದ್ದೆ. ಸದರಿ ದಾವೆಗಳಲ್ಲಿ ಏನು ತಪ್ಪಾಗಿತ್ತು ಎಂದು ಗಮನಿಸಿಲ್ಲ.

ದಾವಾಸ್ತಿ ಒಟ್ಟು ಕುಟುಂಬದ ಮೂಲಕ 2012 ರಲ್ಲಿ ನನಗೆ ಬಂದಿರುತ್ತದೆ. ದಾವೆ ದಾಖಲಿಸುವ ಮೊದಲು ದಾವಾಸ್ತಿಗಳನ್ನು ಅಳತೆ ಮಾಡಿಸಿರುತ್ತೇನೆ. ಹಿಸ್ಸೆ ಆಗುವ ಸಮಯದಲ್ಲಿ ನಮ್ಮ ಸಹೋದರರರು ದಾವಾಸ್ತಿಯನ್ನು ಅಳತೆ ಮಾಡಿಸಿದ್ದರು. ನಾನು ದಾವಾಸ್ತಿಗೆ ಸಂಬಂದಿಸಿದಂತೆ ಅಳತೆ ಮಾಡಿಸಿ ಇ ಖಾತೆ ಪಡೆದು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನನ್ನ ಸಹೋದರನ ಹೆಸರು ಪುಟ್ಟಣ್ಣಯ್ಯ. ನನ್ನ ಸಹೋದರ 1963 ರಲ್ಲಿ ಆಸ್ತಿಯನ್ನು ಖರೀದಿಸಿದ್ದರು. ನಾನು 1963 ರ ಕ್ರಯ ಪತ್ರವನ್ನು ಹಾಜರು ಪಡಿಸಿದ ಬಗ್ಗೆ ನೆನಪಿಲ್ಲ. ನಾನು ಈ ಹಿಂದೆ ದಾಖಲಿಸಿದ್ದ 2 ದಾವೆಗಳಲ್ಲಿ ಸದರಿ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ.

ಈ ಹಿಂದೆ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿದ್ದ ಬಗ್ಗೆ ನನಗೆ ಈಗ ನೆನಪಿಲ್ಲ. ನಾನು ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನನಗೆ ವಿಭಾಗದ ಮೂಲಕ ಪೂರ್ವ-ಪಶ್ಚಿಮ 50 ಅಡಿ, ಉತ್ತರ-ದಕ್ಷಿಣ 25 ಅಡಿ ಮನೆ ಬಂದಿರುತ್ತದೆ ಎಂದರೆ ಸಾಕ್ಷಿ ನಿವೇಶನ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ವಿಭಾಗ ಪತ್ರಕ್ಕೆ ಸಹಿ ಮಾಡಿರುತ್ತೇನೆ.

ನಾನು ವಿಭಾಗ ಪತ್ರದ ಮೂಲಕ ಬಂದ ಆಸ್ತಿಗೆ ಸಂಬಂದಿಸಿದಂತೆ ಪ್ರತಿವಾದಿ ವಿರುದ್ಧ ಈ ದಾವೆ ದಾಖಲಿಸಿರುತ್ತೇನೆ. ವಿಭಾಗ ಪತ್ರದಲ್ಲಿ ನನಗೆ ಬಂದ ಆಸ್ತಿಯ ಉತ್ತರಕ್ಕೆ ಕನ್ಸ್ ರ್ವೆನ್ಸಿ ರಸ್ತೆ ಇರುತ್ತದೆ. ಪ್ರತಿವಾದಿ ನನ್ನ ಆಸ್ತಿಯ ಉತ್ತರಕ್ಕೆ ಇರುತ್ತಾರೆ. ದಾವಾ ಶೆಡ್ಯೂಲ್ ನಲ್ಲಿ, ಉತ್ತರಕ್ಕೆ ಎಂ ಎಂ ವೀರಭದ್ರೇಗೌಡ ಎಂದು ನಮೂದಿಸಿರುತ್ತೇನೆ ಎಂದರೆ ಸಾಕ್ಷಿ ಪ್ರತಿವಾದಿ ಸಹ ಇರುತ್ತಾರೆ ಎಂದು ನುಡಿಯುತ್ತಾರೆ. ನಾವು ಓಡಾಡಲು ಕನ್ಸ್ ರ್ವೆನ್ಸಿ ರಸ್ತೆ ಬಿಟ್ಟುಕೊಂಡಿರುತ್ತೇವೆ. ಪ್ರತಿವಾದಿ ನನ್ನ ಜಾಗದಲ್ಲಿ ಒತ್ತುವರಿ ಮಾಡಿ ಕಾಂಪೌಂಡ್ ಕಟ್ಟಿರುವ ಬಗ್ಗೆ ದಾಖಲೆ ಕೊಟ್ಟಿರುತ್ತೇನೆ. ಆ ಬಗ್ಗೆ ಯಾವ ದಾಖಲೆ ಕೊಟ್ಟಿರುತ್ತೇನೆ ಎಂದು ನೆನಪಿಲ್ಲ.

**(ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು